**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ213/2020 ಪಿ.ಡಬ್ಲೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **04.08.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ 2** ರಿಂದ **5** ನೇ ಪ್ರತಿವಾದಿಗಳ ಪರ ಶ್ರೀ ಕೆ.ಕೆ.ಎನ್ ವಕೀಲರಿಂದಃ

ಈ ದಾವೆಯನ್ನು ಸ್ವಾಮಿರವರು ಶಾರದಮ್ಮ, ಬಸವರಾಜು, ಪುಟ್ಟಮಾದ ಮತ್ತು ನಾಗಮ್ಮರವರ ವಿರುದ್ಧ ಸಲ್ಲಿಸಿರುತ್ತಾರೆ. 1 ನೇ ವಾದಿಯೊಂದಿಗೆ ಒಡಹುಟ್ಟಿದವರು ಇರುತ್ತಾರೆ. ಸದರಿಯವರ ಹೆಸರು ಶಿವಣ್ಣ ಎಂದು ಇದ್ದು, ಸದರಿಯವರು ತೀರಿಕೊಂಡಿದ್ದು, ಅವರ ಮಗ ಹೊಂಬಳಯ್ಯ ಎಂದು ಇರುತ್ತದೆ. 1 ನೇ ವಾದಿಗೆ ಪುಟ್ಟಮ್ಮ ಎನ್ನುವ ಹೆಸರಿನ ಅಕ್ಕ ಇರುತ್ತಾರೆ. ಹೊಂಬಳಯ್ಯ ಮತ್ತು ಪುಟ್ಟಮ್ಮರವರನ್ನು ಹೊರತುಪಡಿಸಿ ಸ್ವಾಮಿರವರಿಗೆ ಒಡಹುಟ್ಟಿದವರು ಇರುವುದಿಲ್ಲ.

ವಾದಿಗಳು ಈ ದಾವೆಯನ್ನು ದಾವಾ ಆಸ್ತಿಯ ಅರ್ಧ ಹಿಸ್ಸೆಗೆ ಹಾಕಿರುತ್ತಾರೆ. ದಾವಾ ಆಸ್ತಿಯು ಪ್ರಸ್ತುತ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ಈ ಹಿಂದೆ ಪ್ರತಿವಾದಿಗಳ ತಂದೆ ನಾರಾಯಣಯ್ಯರವರ ಹೆಸರಿನಲ್ಲಿ ಇತ್ತು. ದಾವಾ ಆಸ್ತಿಯು ನಾರಾಯಣಯ್ಯರವಗಿಂತ ಮುಂಚೆ ಹೊಂಬಳಯ್ಯರವರ ಹೆಸರಿನಲ್ಲಿ ಇತ್ತು. ಹೊಂಬಳಯ್ಯ ರವರು ನಾರಾಯಣಯ್ಯರವರ ತಂದೆ ಎಂದರೆ ಸರಿ.

ನಾನು ಅರವಟ್ಟಿಗೆಕೊಪ್ಪಲು ಗ್ರಾಮದಲ್ಲಿ ಹುಟ್ಟಿನಿಂದಲೂ ವಾಸ ಮಾಡುತ್ತಿದ್ದೇನೆ. ವಾದಿ ಪ್ರತಿವಾದಿಗಳು ನನಗೆ ಸುಮಾರು 40 ವರ್ಷಗಳಿಂದ ಪರಿಚಯ ಇರುತ್ತಾರೆ. ಅಂದಿನಿಂದಲೂ ಸದರಿಯವರು ಅದೇ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳಿಗೆ ಬೇರೆ ಕಡೆ ಜಮೀನುಗಳು ಇದ್ದು, ಸದರಿ ಜಮೀನುಗಳ ಸರ್ವೇ ನಂಬರಗಳು ನನಗೆ ಗೊತ್ತಿರುವುದಿಲ್ಲ. 1 ನೇ ವಾದಿಯು ಕೂಲಿ ಕೆಲಸ ಮಾಡುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮನೆಯ ಕೆಲಸಕ್ಕೆ ಸ್ವಾಮಿರವರು ಕೂಲಿ ಕೆಲಸ ಮಾಡಿಕೊಡುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ

ಪೂರ್ವಜರ ಪರಿಚಯ ಇರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾರಾಯಣಯ್ಯ ಮತ್ತು ಸ್ವಾಮಿರವರ ತಂದೆಯ ಪರಿಚಯ ಇರುತ್ತದೆ ಎಂದು ನುಡಿಯುತ್ತಾರೆ. ನಾರಾಯಣಯ್ಯ ಮತ್ತು ಮಾದಯ್ಯ ದಾಯಾದಿಗಳಾಗಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಗಳಿಗೆ ವಿಭಾಗದಂತೆ ಬಂದಿರುತ್ತದೆ. ಸದರಿ ವಿಭಾಗಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ಯಾವುದೇ ರಕ್ತಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ವಾದಿಯ ಪರಿಚಯ ಇರುವ ಕಾರಣ ನಾನುಅ ವರ ಪರವಾಗಿ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿದ್ದು, ವಾದಿಗಳಿಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಆಕಾರಣದಿಂದ ಸದರಿಯವರಿಗೆ ಯಾವುದೇ ಭಾಗಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**